# ಬಸಿರ ಪೆಟ್ಟಿಗೆಗಳು ಬಾಡಿಗೆಗಿವೆ!

**ಇಷ್ಟು ದಿನಗಳ ಕಾಲ ಕೇವಲ ಎಂ.ಟಿ.ಪಿ.ಯನ್ನೇ ನೆಚ್ಚಿಕೊಂಡು ನೊಣ ಹೊಡೆಯುತ್ತಿದ್ದ ಸಣ್ಣ ಪುಟ್ಟ ಪ್ರಸೂತಿ ಗೃಹಗಳು ಬಸುರಿಯರಿಂದ ಕಿಕ್ಕಿರಿಯತೊಡಗಿದವು.**

■ ಗೌರಿ ಚಂದ್ರಕೇಸರಿ

ಈ ಮಹಾನಗರಗಳಿಗೆ ನಿದ್ದೆಯೆಂಬುದೇ ಇಲ್ಲ. ಬೆಳಗಿನಿಂದ ಹಿಡಿದು ಮುಂದಿನ ಬೆಳಗಿನವರೆಗೂ ಅದೇ ಧಾವಂತದ ಬದುಕು. ಕತ್ತಲು ಮೈತುಂಬುವವರೆಗೂ ಹೊರಗಿನ ಸಂತೆ. ಬೆಳಕು ಮೂಡುವವರೆಗೂ ಒಳಗಿನ ಸಂತೆ. ಏನೇ ಆಗಲಿ ಎಲ್ಲರೂ ಮಾಡುವುದು ಹೊಟ್ಟೆಯನ್ನು ಹೊರೆಯಲೆಂದೇ. ವಿಚಿತ್ರವೆಂದರೆ ಇಲ್ಲಿ ಬೆಳಗಿನ ಹೊತ್ತು ಕತ್ತಲೆಯನ್ನು ಹೊದ್ದುಕೊಂಡರೆ, ರಾತ್ರಿ ಬೆಳಕನ್ನು ಮೈಮೇಲೆ ಎಳೆದುಕೊಳ್ಳುತ್ತಾರೆ. ಇರುವ ಬೆಳಕನ್ನು ಮರೆಮಾಚಿ ಹಗಲನ್ನು ಕತ್ತಲನ್ನಾಗಿಸುತ್ತಾರೆ. ತರಾವರಿಯ ವಿದ್ಯುತ್ ದೀಪಗಳಿಂದ ಸಿಂಗರಿಸಿ ಕತ್ತಲನ್ನು ಬೆಳಗಾಗಿಸುತ್ತಾರೆ. ರಾತ್ರಿ ಮಾಡಬೇಕಾದ ನಿದ್ದೆಯನ್ನು ಮುಂದೂಡಿ ನೈಟ್ ಶಿಫ್ಟ್ ಎಂಬ ಹೆಸರಲ್ಲಿ ಮೈಗೂ ಮನಸಿಗೂ ಕೆಲಸ ಕೊಡುತ್ತಾರೆ. ಸೂರ್ಯ ಬಾನಿಂದ ಇಣುಕಿ ನೋಡುವ ಮೊದಲೇ ಹಕ್ಕಿಗಳು ಗೂಡಿನಿಂದ ಹಾರಿ ಕಲರವವನ್ನೆಬ್ಬಿಸುವುದರಲ್ಲೇ ಇವರು ಹಾಸಿಗೆ ಸೇರಿ ನಿದ್ರೆಯ ಆಳಕ್ಕೆ ಇಳಿಯುತ್ತಾರೆ. ಇದು ಈ ಮಹಾನಗರಗಳಿಗಿರುವ ಅನಿವಾರ್ಯತೆ.

ಭಾನುವಾರದ ಒಂದು ಬೆಳಿಗ್ಗೆ ಮನೆ ಮನೆಗಳನ್ನು ತಲುಪಿದ ಸುದ್ದಿ ಪತ್ರಿಕೆಗಳ ಒಡಲಿಂದ ಉದುರಿದ ಒಂದು ಜಾಹೀರಾತು ಮಹಾನಗರದ ಮನಗಳ ಗಮನವನ್ನು ಸೆಳೆಯಿತು. 'ಬಸಿರ ಪೆಟ್ಟಿಗೆಗಳು ಬಾಡಿಗೆಗಿದೆ. ಸಂತಾನ ಭಾಗ್ಯಕ್ಕಾಗಿ ಹಂಬಲಿಸುತ್ತಿರುವಿರಾ? ಮಗು ಪಡೆಯುವ ವಯಸ್ಸು ಮೀರಿದೆಯೇ? ವೃತ್ತಿಯ ಕಾರಣದಿಂದ ಗರ್ಭ ಧರಿಸುವುದನ್ನು ಮುಂದೂಡುತ್ತಿರುವಿರಾ? ಬಾಣಂತನದ ಸಮಸ್ಯೆಯೆ? ಬನ್ನಿ ಈ ಎಲ್ಲ ಸಮಸ್ಯೆಗಳಿಗೂ ನಮ್ಮಲ್ಲಿದೆ ಪರಿಹಾರ...' ಎಂಬ ಒಕ್ಕಣೆಯನ್ನು ಹೊಂದಿದ್ದ ಆ ಬ್ರೋಷರ್‌ನ ಕೆಳ ಅಂಚಿನಲ್ಲಿ ವೈದ್ಯರ ಹೆಸರು, ವಿಳಾಸ, ದೂರವಾಣಿ ಸಂಖ್ಯೆಗಳನ್ನು ದೊಡ್ಡ ಅಕ್ಷರಗಳಲ್ಲಿ ಮುದ್ರಿಸಲಾಗಿತ್ತು. ವಿದೇಶದಲ್ಲಿ ತರಬೇತಿಯನ್ನು ಹೊಂದಿದ, ಹತ್ತು ವರ್ಷಗಳ ಕಾಲ ಅಲ್ಲಿಯೇ ನೆಲೆಸಿ ಸೇವೆ ಸಲ್ಲಿಸಿದ ಡಾಕ್ಟರ್ ಅಗರ್ವಾಲ್ ದಂಪತಿಗಳ ವಿವರ ಅದಾಗಿತ್ತು. ಇದೀಗ ತಮ್ಮ ಸೇವೆಯನ್ನು ತಾಯ್ನಾಡಿನಲ್ಲಿ ಸಲ್ಲಿಸಲು ಬಂದುದಾಗಿ ಅದರಲ್ಲಿ ಬರೆಯಲಾಗಿತ್ತು. ಈ ಜಾಹೀರಾತನ್ನು ಕಂಡ ಅದೆಷ್ಟೋ ದಂಪತಿಗಳಲ್ಲಿ ಆಸೆಯ ಮಿಣುಕೊಂದು ಫಳಕ್ ಎಂದಿತ್ತು. ಒಂದೇ ಮನೆಯಲ್ಲಿದ್ದರೂ ಒಬ್ಬರನ್ನೊಬ್ಬರು ಸಂಧಿಸಲಾಗದ ಅನಿವಾರ್ಯತೆಗೆ ತಮ್ಮನ್ನು ತಾವು ಒಡ್ಡಿಕೊಂಡವರು, ನೈಟ್ ಶಿಫ್ಟ್‌ಗಳ ಜಾಲದಲ್ಲಿ ಸಿಲುಕಿ ಸದ್ಯಕ್ಕೆ ಮಗು ಬೇಡವೆಂದುಕೊಳ್ಳುತ್ತಲೇ ನಲವತ್ತರ ಗಡಿಗೆ ಬಂದು ನಿಂತವರು, ಎಂದೋ ಒಂದು ದಿನ ಜ್ಞಾನೋದಯವಾಗಿ ಮಗು ಮಾಡಿಕೊಳ್ಳಲು 'ದಿಸ್ ಇಸ್ ದ ರೈಟ್ ಟೈಮ್' ಎಂದು ರಾಂಗ್ ಟೈಮ್‌ನ ಆಯ್ದುಕೊಂಡವರು, ಎರಡು ಮೂರು ವರ್ಷಗಳಿಂದಲೂ ಪ್ರಯತ್ನಿಸಿ ಫಲ ಸಿಗದಾದಾಗ ಕಂಡ ಕಂಡ ಆಸ್ಪತ್ರೆಯ ಬಾಗಿಲು ಬಡಿದವರು, ಮಗುವನ್ನು ಹೊತ್ತು ಹೆತ್ತು ಈ ಭೂಮಿಗೆ ತರಬಹುದು. ಆದರೆ ನಂತರ ಅದನ್ನು ನೋಡಿಕೊಳ್ಳುವವರು ಯಾರು? ಬಾಣಂತನ ಮಾಡುವ ಅಮ್ಮನೆಂಬ ಜೀವ ಇಲ್ಲದ ಹೆಣ್ಣು ಮಕ್ಕಳು, ಹೀಗೆ ನೂರಾರು ಬಗೆಯ ಸಮಸ್ಯೆಗಳನ್ನು ಹೊಂದಿದ ಮಹಾನಗರದ ಜನರಿಗೊಂದು ಸದವಕಾಶ ದೊರೆತಿತ್ತು. ಈ ಸೆನ್ಸೇಷನಲ್ ಜಾಹೀರಾತಿನಿಂದ ಮಕ್ಕಳಿಲ್ಲದವರಿಗೆ ಪುಕ್ಕಟೆ ಸಲಹೆಗಳು ಸಿಗಲಾರಂಭಿಸಿದವು. ಹೆತ್ತವರಿಂದ ಮಕ್ಕಳಿಗೆ, ಸ್ನೇಹಿತರಿಂದ ಸ್ನೇಹಿತರಿಗೆ ಹೀಗೆ ಒಬ್ಬರಿಂದ ಇನ್ನೊಬ್ಬರ ಕಿವಿಗಳಿಗೆ ವಿಷಯ ತಾಕಲಾರಂಭಿಸಿದಾಗ ಕಿರಿ ಕಿರಿ ಎನ್ನಿಸಿದರೂ ಒಮ್ಮೆ ಪ್ರಯತ್ನಿಸುವುದರಲ್ಲಿ ತಪ್ಪೇನಿಲ್ಲ ಎನ್ನಿಸಿದ್ದು ಸುಳ್ಳೇನಲ್ಲ.

ಜಾಹೀರಾತು ಪ್ರಕಟಗೊಂಡ ದಿನದಿಂದಲೇ ಡಾಕ್ಟರ್ ಅಗರ್ವಾಲ್ ಆಸ್ಪತ್ರೆಗೆ ಸಾವಿರಾರು ದೂರವಾಣಿ ಕರೆಗಳು ಬರತೊಡಗಿದವು. ಫೋನಾಯಿಸಿದ ವ್ಯಕ್ತಿಗಳು ಹಲೋ ಎಂದೊಡನೆಯೇ ಅತ್ತ ಕಡೆಯಿಂದ ಮಧುರವಾದ ಧ್ವನಿ ಮುದ್ರಿಕೆಯೊಂದು ಉಲಿಯತೊಡಗುತ್ತಿತ್ತು. ಈ ಜಾಹೀರಾತು ಕುರಿತಂತೆ ಸಮಗ್ರ ಮಾಹಿತಿಯನ್ನು ತಿಳಿದುಕೊಳ್ಳಲು ಡಾಕ್ಟರ್ ಅಗರ್ವಾಲ್ ರವರ ಆಸ್ಪತ್ರೆಗೆ, ಬರುವ ಭಾನುವಾರದಂದು ಬೆಳಿಗ್ಗೆ ಹನ್ನೊಂದು ಗಂಟೆಗೆ ಬರಬೇಕಾಗಿ ಹೇಳಿ ಕರೆ ಕಡಿತಗೊಳ್ಳುತ್ತಿತ್ತು. ಮಹಾನಗರದ ಜನರ ಕುತೂಹಲಕ್ಕೆ ರೆಕ್ಕೆ ಪುಕ್ಕಗಳು ಮೂಡತೊಡಗಿ ಎಲ್ಲೆಂದರಲ್ಲಿ, ಹೇಗೆಂದರೆ ಹೇಗೆ ಹಾರತೊಡಗಿದವು. ನವ ಮಾಸಗಳ ಕಾಲ ತಾಯ ಗರ್ಭದಲ್ಲಿ ಬೆಳೆಯಬೇಕಾದ ಮಗುವನ್ನು ಒಂದು ಪೆಟ್ಟಿಗೆಯಲ್ಲಿಟ್ಟು ಬೆಳೆಸುವುದೆಂದರೆ? ಇದು ನಂಬುವಂತಹ ಮಾತೆ? ಅದೆಂತಹ ಪೆಟ್ಟಿಗೆ ಇರಬಹುದು? ಅದರಲ್ಲಿ ಮಗು ಬೆಳೆಯುವುದಾದರೂ ಹೇಗೆ? ಹೆಣ್ಣಿಗೆ ಹೊರುವ ಹೆರುವ ಕಷ್ಟವೇ ಇಲ್ಲ. ಪೇಟೆಗೆ ಹೋಗಿ ಬ್ರೆಡ್ಡನ್ನೋ, ಹಾಲಿನ ಪೊಟ್ಟಣವನ್ನೋ ತಂದಷ್ಟೇ ಸುಲಭವಾಗಿ ತಮ್ಮದೇ ರಕ್ತವನ್ನು ಹಂಚಿಕೊಂಡು ಹುಟ್ಟುವ ಮಗುವನ್ನು ಪಡೆಯುವುದೆಂದರೆ? ವೈದ್ಯಕೀಯ ಕ್ಷೇತ್ರ ಅದೆಷ್ಟು ಮುಂದುವರೆದಿದೆ? ಇಷ್ಟೊಂದು ಸಲೀಸಾಗಿ ಮಗುವನ್ನು ಪಡೆಯುವುದಾದರೆ ಮನೆಗೊಂದೇ ಮಗುವೇಕೆ? ಇನ್ನೂ ಒಂದು ಮಗುವನ್ನು ಮಾಡಿಕೊಳ್ಳಬಹುದಲ್ಲ? ಹೀಗೆ ತಲೆಗೊಂದರಂತೆ ಊಹೆ, ವಿಚಾರಗಳು ಮಹಾನಗರದ ಜನರ ತಲೆಗೆ